ಆ) 1978ರ ಮೊದಲಿನಿಂದಲೂ ಕೃಷಿ ಮಾಡಿ ಸ್ವಾಧೀನ ಹೊಂದಿದ ಅಕ್ರಮ ಜಮೀನನ್ನು ಗುರುತಿಸದಿರುವುದು ಸಾಕಷ್ಟು ಇದೆ; ಅವುಗಳನ್ನು ಗುರುತಿಸುವ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಳ್ಳಲಿದೆಯೇ:

ಇ) ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಜಮೀನು ಹಸ್ತಾಂತರ ಮಾಡುವಾಗ ಇರುವ ಅಕ್ರಮಣಗಳನ್ನು ಗುರುತಿಸದೆ ಹಸ್ತಾಂತರ ಮಾಡಿದ ಪ್ರಕರಣಗಳು ರಾಜ್ಯದಲ್ಲಿ ಮತ್ತು ಉಡುಪಿ ಜಿಲ್ಲೆಯಲ್ಲಿ ಎಷ್ಟಿವೆ?

ಶ್ರೀ ಕೆ.ಹೆಚ್. ರಂಗನಾಥ (ಅರಣ್ಯ ಸಚಿವರು):

ಅ) ಗುರುತಿಸಲಾಗಿದೆ.

ಆ) ಹೌದು

ಹಮ್ಮಿಕೊಳ್ಳಲಾಗಿದೆ.

ಇ) ಸರ್ಕಾರವು ತನ್ನ ಆದೇಶ ಸಂಖ್ಯೆ : ಆರ್‌ಡಿ 106 ಎಲ್‌ಜಿಪಿ 88, ದಿನಾಂಕ 7.6.93 ರನ್ವಯ ಅತಿಕ್ರಮಣದಿಂದ ಹೊರತುಪಡಿಸಿದ ಸಿ ಮತ್ತು ಡಿ ವರ್ಗದ ಭೂಮಿಯನ್ನು ಅರಣ್ಯ ಇಲಾಖೆಗೆ ಲ್ಯಾಂಡ್ ಬ್ಯಾಂಕ್ ರಚಿಸಲು ಹಸ್ತಾಂತರಿಸಿದೆ.

ಆದ್ದರಿಂದ ರಾಜ್ಯದಲ್ಲಿ ಅರಣ್ಯ ಇಲಾಖೆಗೆ ಹಸ್ತಾಂತರ ಮಾಡುವಾಗ ಸದರಿ ಜಮೀನುಗಳಲ್ಲಿ ಯಾವುದೇ ಅತಿಕ್ರಮಣಗಳು ಇದ್ದಿರುವುದಿಲ್ಲ.

ಬೆಂಗಳೂರಿನ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಕಟ್ಟಡ ನಿರ್ಮಾಣ

2439 (3078) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ವಾರ್ತಾ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಕಟ್ಟಡ ಕಟ್ಟಲು ಸಕ್ಷಮ ಪ್ರಾಧಿಕಾರಿಗಳ ಅನುಮೋದನೆ ಇಲ್ಲದೆ ಮತ್ತು ಭೂ ಪರಿವರ್ತನೆ ಇಲ್ಲದೆ ಮತ್ತು ಅಂಗೀಕೃತ ನಕ್ಷೆ ಇಲ್ಲದ ಕಾರಣ ನಿರ್ಮಾಣಕ್ಕೆ ಐದಾರು ವರ್ಷಗಳ ಕಾಲ ವಿಳಂಬಗೊಂಡಿದ್ದರಿಂದ ಸರ್ಕಾರಕ್ಕೆ ರೂ. 1.61 ಕೋಟಿ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅನಾವಶ್ಯಕವಾಗಿ ರೂ. 33.93 ಲಕ್ಷ ಹೆಚ್ಚುವರಿ ವೆಚ್ಚವನ್ನು ಗುತ್ತಿಗೆದಾರರಿಗೆ ನೀಡಿರುವ ಈ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ನಷ್ಟಕ್ಕೆ ಕಾರಣರಾಗಿರುವ ಅಧಿಕಾರಿಗಳು ಯಾರು;

ಇ) ಈ ರೀತಿಯ ನಷ್ಟಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವ ಯಾವ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲಾಗಿದೆ;

ಈ) ಈ ಅಧಿಕಾರಿಗಳಿಂದ ಆದ ನಷ್ಟವನ್ನು ವಸೂಲು ಮಾಡಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಅಲ್ಲಂ ವೀರಭದ್ರಪ್ಪ (ವಾರ್ತಾ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ನ್ಯಾಯಾಲಯದಲ್ಲಿ ಮೊಕದ್ದಮೆ ಬಾಕಿ ಇದ್ದುದರಿಂದ ಕಟ್ಟಡದ ಕಾಮಗಾರಿಗಳಲ್ಲಿ ವಿಳಂಬವಾಗಿರುತ್ತದೆ ಆದರೆ, ಈ ದಿನಾಂಕದವರೆಗೆ ಸರ್ಕಾರಕ್ಕೆ ಯಾವುದೇ ನಷ್ಟವಾಗಿರುವುದಿಲ್ಲ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿನ ಲೋಕೋಪಯೋಗಿ ಇಲಾಖೆಯ ರಸ್ತೆಗಳು

2440 (3079) : ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳ ನಿರ್ವಹಣೆಗೆ, ಕೇಂದ್ರ ಸರ್ಕಾರದಿಂದ ಮತ್ತು ನಬಾರ್ಡ್‌ನಿಂದ ಬಂದಿರುವ ಸಹಾಯಧನ ಎಷ್ಟು; ವರ್ಷವಾರು ವಿವರ ಕೊಡುವುದು;

ಆ) ಈ ಸಹಾಯಧನವನ್ನು ಯಾವ ಯಾವ ರಸ್ತೆಗಳ ಅಭಿವೃದ್ಧಿಗಾಗಿ ನೀಡಲಾಗಿದೆ; ರಸ್ತೆ ಹಾಗೂ ಸಹಾಯಧನದ ವರ್ಷವಾರು ವಿವರ ಕೊಡುವುದು;

ಇ) ಈ ಸಹಾಯಧನವನ್ನು ಅದೇ ಉದ್ದೇಶಗಳಿಗಾಗಿ ವೆಚ್ಚ ಮಾಡಲಾಗಿದೆಯೇ ಅಥವಾ ಬೇರೆ ಉದ್ದೇಶಕ್ಕೆ ಮತ್ತು ಬೇರೆ ರಸ್ತೆಗಳ ಅಭಿವೃದ್ಧಿಗೆ ವೆಚ್ಚ ಮಾಡಿರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ರೀತಿಯ ಬದಲಾವಣೆಗಳು ಅಂಗೀಕೃತ ಒಪ್ಪಂದದ ವಿರುದ್ಧ ಅಲ್ಲವೆ; ಹೌದಾದರೆ, ಇದನ್ನು ಸರಿಪಡಿಸಲು ಕೈಗೊಂಡಿರುವ ಕ್ರಮವೇನು;

ಉ) ನಿರ್ವಹಿಸಿರುವ ಕಾಮಗಾರಿ ನಿಗಧಿಪಡಿಸಿದ ಮಾನದಂಡಕ್ಕೆ ಅನುಗುಣವಾಗಿದೆಯೇ;

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು): ಅ) ಲೋಕೋಪಯೋಗಿ ಇಲಾಖೆಯ ರಸ್ತೆಗಳ ನಿರ್ವಹಣೆಗೆ ಕೇಂದ್ರ ಸರ್ಕಾರ ಮತ್ತು ನಬಾರ್ಡ್‌ನಿಂದ ಧನಸಹಾಯ ಪಡೆದಿರುವುದಿಲ್ಲ. "ಕೇಂದ್ರ ರಸ್ತೆ ನಿಧಿ" ಯಿಂದ ಲೋಕೋಪಯೋಗಿ ಇಲಾಖೆಯ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ಅನುದಾನ ಒದಗಿಸಲಾಗುತ್ತಿದೆ. ಹಾಗೂ ನಬಾರ್ಡ್ ಸಂಸ್ಥೆಯಿಂದ ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿಗೆ ಸಾಲ ಪಡೆಯಲಾಗುತ್ತಿದೆ.

ಕಳೆದ ಮೂರು ವರ್ಷಗಳಲ್ಲಿ ಪಡೆದ ಅನುದಾನ / ಸಾಲದ ವಿವರ ಕೆಳಕಂಡಂತಿದೆ.

(ಮೊತ್ತ ಕೋಟಿ ರೂ.ಗಳಲ್ಲಿ)

	2000–01	2001–02	2002–03
ಸಿ.ಆರ್.ಎಫ್	48.05	76.19	39.85
ನಬಾರ್ಡ್	34.13	1.42	1.31

ಆ) ವಿವರವನ್ನು ಅನುಬಂಧದಲ್ಲಿ ನೀಡಿದೆ.

ಇ) "ಕೇಂದ್ರ ರಸ್ತೆ ನಿಧಿ" ಮತ್ತು "ನಬಾರ್ಡ್" ಯೋಜನೆಗಳಡಿ ಮಂಜೂರಾದ ಕಾಮಗಾರಿಗಳನ್ನು ಮಾತ್ರ ಕೈಗೊಳ್ಳಲಾಗುತ್ತಿದೆ.

ಈ) ಉದ್ಭವಿಸುವುದಿಲ್ಲ.

ಉ) ಹೌದು.